ರತ್ನಜ, ಮೈಸೂರು
*ಮಂಕುಬೂದಿ, ಚಳ್ಳೆಹಣ್ಣು, ಉಂಡೆನಾಮ, ಪಂಗನಾಮ, ಇವೆಲ್ಲ ಎಲ್ಲಿ ಸಿಗುತ್ತೆ ರಾಂಜೀ?*



ಬಿಡಿಯಾಗಿ ಬೇಕಾದರೆ ಆನ್‌ಲೈನ್ ಮಾರ್ಕೆಟಿಂಗ್‌ಗೆ ಹೋಗಿ; ಒಟ್ಟಿಗೆ ಬೇಕಾದರೆ ವಿಧಾನಸೌಧಕ್ಕೆ.

ಸುಂದರ್, ಬೆಂಗಳೂರು
*ಗಿಡ ನೆಡಿ ಗಿಡ ನೆಡಿ ಗಿಡಾ ನೆಡಿ ಎನ್ನುವುದು ಘೋಷವಾಕ್ಯ; ಗಿಡನೆಡಿ ಮರವಾದಮೇಲೆ ಕಡಿ ಎನ್ನುವುದು?*
ಯಾರಿಗೂ ಕಾಣದಂತೆ ಘೋಷಾ ಹಾಕಲೇಬೇಕಾದ ದೋಷವಾಕ್ಯ.

ಬಿ. ಬೋರೇಗೌಡ, ಸರಸ್ವತಿಪುರ
*ತಿರುಪತಿ ತಿಮ್ಮಪ್ಪನು ಕೈ ಬಿಟ್ಟಾಗ ಮುಂದಿನ ದಾರಿ ಯಾವುದು ಗುರುಗಳೆ?*
ಕುಬೇರನನ್ನು ಕೇಳಿನೋಡಿ. ತಿಮ್ಮಪ್ಪನೂ ಕಷ್ಟದಲ್ಲಿದ್ದಾಗ ಕುಬೇರನನ್ನೇ ಕೇಳಿದ್ದು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಮದುವೆಗಳು ಸ್ವರ್ಗದಲ್ಲಿ ನಡೆದರೂ ವಿಚ್ಛೇದನಗಳು ಭೂಲೋಕದಲ್ಲೇ ಆಗಲು ಕಾರಣವೇನು?*



ಸ್ವರ್ಗದಲ್ಲಿ ವಕೀಲರಿಲ್ಲದ ಏಕೈಕ ಕಾರಣ.

ಕುಮಾರ ಚಲವಾದಿ, ಹೊಳೆನರಸಿಪುರ
*ಕೋಟಿ ಕೋಟಿ ಹಣ ದೋಚುವವರ ನಡುವೆ ಬಾಹುಬಲಿಯ ತ್ಯಾಗ-ವೈರಾಗ್ಯ ಏನೂ ಪ್ರಭಾವ ಬೀರಲಾರದೆ?*
ಎಫೆಮ್ ರೈನ್‌ಬೋಗೆ ಟ್ಯೂನ್ ಮಾಡಿ ರೇಡಿಯೋ ಸಿಟಿ ಕೇಳಲಾಗದು. ಅವರ ಫ್ರೀಕ್ವೆನ್ಸಿಯೇ ಬೇರೆ; ಇವರ ಫ್ರೀಕ್ವೆನ್ಸಿಯೇ ಬೇರೆ.

ನ ಖಾತೆ ಆನಂದರಾವ್, ಮೈಸೂರು
*ಹಿಂದಿನ ಕಾಲದಲ್ಲಿ ತಪಸ್ವಿಗಳು, ಮಹರ್ಷಿಗಳು ಗಡ್ಡವನ್ನೇಕೆ ಬಿಡುತ್ತಿದ್ದರು?*
‘ಛಿ! ಚುಚ್ಚತ್ತೆ; ಬೋಳಿಸ್ಕೊಳ್ರಿ’ ಎನ್ನುವ ಹೆಂಡತಿ, ಮಕ್ಕಳು ಇರುತ್ತಿರಲಿಲ್ಲವಲ್ಲ.

ಬಿ. ಚಂದ್ರೇಗೌಡ, ಬೆಂಗಳೂರು
*ಸಾವನ್ನು ಕಂಡು ಸಂಭ್ರಮಿಸುವುದು ಏನನ್ನು ಸೂಚಿಸುತ್ತದೆ?*
ಅವರಿಗೆ ವಾರಕ್ಕಾಗುವಷ್ಟು ಬ್ರೇಕಿಂಗ್ ನ್ಯೂಸ್ ಸಿಕ್ಕಿತು ಎಂಬುದನ್ನು ಸೂಚಿಸುತ್ತದೆ.

ಮುರಲೀಧರ ಕುಲಕರ್ಣಿ, ಬೀದರ್
*ಕೊರಳ ಹಾರದ ಮುತ್ತಿಗೂ, ಕೊರಳು ಬಳಸಿ ಕೊಡುವ ಮುತ್ತಿಗೂ ಇರುವ ವ್ಯತ್ಯಾಸವೇನು?*
ಒಂದು ರಮಣೀಯ; ಒಂದು ಸ್ಮರಣೀಯ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಯಾವ ಕೈಗಳು ಶ್ರೇಷ್ಠ?*
ನಶ್ಯ ವಿನಿಮಯದ ಹೊರತಾಗಿ ಮಿಕ್ಕೆಲ್ಲ ವಿನಿಮಯಗಳಲ್ಲೂ ಮೇಲಿರುವ ಕೈಗಳೇ ಶ್ರೇಷ್ಠ.

ಎಸ್ಸೆನ್ಕೆ, ಕಡೂರು
*ಬಿಗ್‌ಬಾಸ್ ಮನೆಗೆ ಹೋದರೆ ನೀವು ಎಷ್ಟು ದಿನ ಇರುತ್ತೀರಿ?*
ಛಿ! ಅಲ್ಲೇಕೆ ಹೋಗಲಿ! ಹಣಕ್ಕಾಗಿ ಬಂಧಿಯಾಗುವುದು ನನಗೆ ಎಂದೂ ಸರಿಬರದ ವಿಷಯ.

ಮೆಹಬೂಬ ಶೇಖಬಡೆ, ಮೂಡಲಗಿ
*ವೈದ್ಯರು ನರಹರಿ ಅಂತೆ. ಹಾಗಿದ್ದರೆ ಇತ್ತೀಚೆಗೆ ಅವರು ಮಾಡುತ್ತಿರುವುದು ಸರಿಯೆ?*
ತಪ್ಪೇನು? ಶಕ್ತ್ಯಾನುಸಾರ ನರ ಹರಿಯುತ್ತಿದ್ದಾರಲ್ಲ!

ಕೆ.ಎಂ. ವೀರೇಶ್, ಕೂಡ್ಲಿಗಿ
*ಸಾರ್ಥಕತೆಯ ಮುಖ್ಯ ಲಕ್ಷಣಗಳೇನು ರಾಮ್?*
ಆಚಾರ ವಿಚಾರಗಳಲ್ಲಿ ಅರ್ಥ ಹೆಚ್ಚು, ಕತೆ ಕಡಿಮೆ ಇರುವುದು.

ಆರ್. ಮಧುಸೂದನ್, ಹಾಸನ
*ಅವಳ ಅಧರದ ಬಳಿ ಹೋದಾಗಲ್ಲೆಲ್ಲ ನನಗೆ ಆಕ್ಷಿ ಬರುತ್ತದೆ. ಕಾರಣ ಏನಿರಬಹುದು?*
ತಿಳಿಯಲಿಲ್ಲವೆ? ಬ್ಯಾಡಗಿಯ ಹುಡುಗಿ, ಬಹಳ ಖಾಟು.

## ಬಹುಮಾನಿತ ಪ್ರಶ್ನೆ

ಅಮೃತೇಶ್ವರ ತಂಡರ, ಅಣ್ಣಿಗೇರಿ
*ಇಂದಿನ ಧರ್ಮಾಧರ್ಮದ ಕಲುಷಿತ ವಾತಾವರಣದಲ್ಲಿ ‘ಮಾನವಕುಲ ತಾನೊಂದೆ ವಲಂ’ ಎಂದಿದ್ದ ಪಂಪ ಹುಟ್ಟಿ ಬಂದರೆ?*
ಪ್ರಾಣಹಾನಿ, ಪರಿಸರಹಾನಿಗಳನ್ನು ಕಂಡು ‘ಮಾನವಕುಲ ತಾನೊಂದೆ ಖಳಂ’ ಎಂದುಸುರುತ್ತಿದ್ದ.

ಮಹಾವೀರ ಕಾಸರ, ಶಿವಮೊಗ್ಗ
*ಕೃಷ್ಣನ ಕುತಂತ್ರಗಳನ್ನೊಳಗೊಂಡಿದ್ದ ಕುರುಕ್ಷೇತ್ರ ಯುದ್ಧ ಧರ್ಮಯುದ್ಧ ಹೇಗಾದೀತು?*
ಅದು ಕುರು-ಕ್ಷೇತ್ರವಲ್ಲವೆ! ಕುರು ಎದ್ದಾಗ ನಿವಾರಿಸಲು ಅದರ ಬುಡಕ್ಕೆ ಬಿಸಿ ಮುಟ್ಟಿಸುವುದು ಕುತಂತ್ರವಲ್ಲ, ತಂತ್ರ.

ಎಂ.ಎ. ಕುಮಾರ್, ಬೆಂಗಳೂರು
*ಹಗಲು ಕನಸು ಕಾಣುವವರು ಯಾರು?*



ನೈಟ್ ಷಿಫ್ಟ್‌ನವರು.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಹಾಕಿಕೊಟ್ಟ ಆಚಾರ-ವಿಚಾರ, ನಡೆ-ನುಡಿಗಳನ್ನು ಬದಿಗೊತ್ತಿ ಕೇವಲ ನಮ್ಮ ದೇವರು, ನಮ್ಮ ಶರಣ, ಇವ ನಮ್ಮವನೆಂದರೆ ಹೇಗೆ?*
ಸವಲತ್ತಿಗಾಗಿ ಕೋಲೆಬಸವ-ಪಥ ಹಿಡಿದವರಿಗೆ ಬಸವಪಥ ಕಾಣದಯ್ಯಾ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಅಧಿಕಾರದ ಮದ ಎನ್ನುವುದು ದೇವರ ಮುಂದೆಯೂ ದುರಹಂಕಾರ ತೋರಿಸುವಂತೆ ಮಾಡಿದೆಯಲ್ಲಾ ರಾಂ?*
ರ್‍ಯಾಬಿಸ್ ಇದ್ದಲ್ಲಿ ವಿವೇಕ ಇರದು. ಅಧಿಕಾರಮದ ನಾಯಕರ ರ್‍ಯಾಬಿಸ್.

ಯಶೋದಾ ಶಿವಣ್ಣ ಶೆಟ್ಟಿ, ಕಾರ್ಕಳ
*ಈ ಹಿಂದೆ ಎಲ್ಲೆಲ್ಲೋ ಕಾಣಿಸಿಕೊಳ್ಳುತ್ತಿದ್ದ ಹಾವುಗಳು ಈಗ ಟಿವಿಯಲ್ಲಿ ಕಾಣಿಸಿಕೊಳ್ಳುತ್ತಿವೆಯಲ್ಲ ಸಾರ್?*
ನಿರ್ಮಾಪಕರ ಟಿಆರ್‌ಪಿ ರೂಪದ ನಿಧಿ ಕಾಯಲೆಂದು ನಿಯೋಜಿತವಾಗಿವೆಯಂತೆ.

■ ರಾಮ್